# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 1

**ವಿಷಯ : ಸಮಾಜ ವಿಜ್ಞಾನ** **ವಿಷಯ ಸಂಕೇತ : 85-K**

**ಅವಧಿ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 80**

**ಕನ್ನಡ ಮಾಧ್ಯಮ**

**ಶಾಲಾ ಅಭ್ಯರ್ಥಿಗಳಿಗೆ**

---

## ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಈ ಪ್ರತಿಯೊಂದು ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 8 x 1 = 8**

1. 1800ರಲ್ಲಿ ಆಂಗ್ಲರ ವಿರುದ್ಧ ಬಿದನೂರು ಮತ್ತು ಶಿಖಾರಿಪುರದಲ್ಲಿ ದಂಗೆದ್ದವರು :
   - A. ಹೈದರ್ ಅಲಿ
   - B. ದೊಂಡಿಯಾ ವಾಘ
   - C. ಚೆನ್ನಮ್ಮ
   - D. ಸಂಗೊಳ್ಳಿ ರಾಯಣ್ಣ

2. ಡಿರೆಜಿಯೋ ತನ್ನ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಲು ಕಾರಣ :
   - A. ಅವರ ಸಹೋದ್ಯೋಗಿಗಳ ಮತ್ತು ಬೆಂಬಲಿಗರ ಒತ್ತಡ
   - B. ಅವರ ಅನಾರೋಗ್ಯ
   - C. ವೇದಗಳ ಅಭ್ಯಾಸದ ಮೇಲೆ ಅವರಿಗಿದ್ದ ಆಸಕ್ತಿ
   - D. ಇಂಗ್ಲೆಂಡಿಗೆ ಹಿಂದಿರುಗುವಂತೆ ಸರ್ಕಾರದಿಂದ ಒತ್ತಡ

3. ಪಂಚಶೀಲ ತತ್ವಗಳಿಗೆ ಸಹಿಹಾಕಿದವರು :
   - A. ಜವಹರ್‌ಲಾಲ್ ನೆಹರೂ ಮತ್ತು ಮೇಜಿ
   - B. ಮೋತಿಲಾಲ್ ನೆಹರೂ ಮತ್ತು ಚೌಎನ್‌ಲೈ
   - C. ಜವಹರ್‌ಲಾಲ್ ನೆಹರೂ ಮತ್ತು ಚೌಎನ್‌ಲೈ
   - D. ಮೋತಿಲಾಲ್ ನೆಹರೂ ಮತ್ತು ಚಾಚಾ ನೆಹರೂ

4. ವಲಸೆಯು ಇದರ ಒಂದು ಪ್ರಮುಖ ಲಕ್ಷಣವಾಗಿದೆ :
   - A. ಸಂಘಟಿತ ವಲಯ ಕಾರ್ಮಿಕರು.
   - B. ಅಸಂಘಟಿತ ವಲಯ ಕಾರ್ಮಿಕರು.
   - C. ಬಾಲಕಾರ್ಮಿಕರು.
   - D. ಮಹಿಳಾ ಕಾರ್ಮಿಕರು.

5. ನರ್ಮದಾ ಬಚಾವೊ ಆಂಧೋಲನವನ್ನು ಕೈಗೊಂಡವರು :
   - A. ಮೇಧಾ ಪಾಟ್ಕರ್
   - B. ಅರ್ಜುನ್ ಆರಾಧ್ಯ
   - C. ತೆಹರಿ ಘರ್‌ವಾಲಿ
   - D. ಸಲ್ಯಾನಿಯ ಗ್ರಾಮಸ್ಥರು

6. ನಾಗಾರ್ಜುನ ಸಾಗರ ಅಣೆಕಟ್ಟೆಯನ್ನು ಈ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ :
   A. ರಿಹಾಂಡ ನದಿ
   B. ಕಾವೇರಿ ನದಿ
   C. ಸಟ್ಲೆಜ್ ನದಿ
   D. ಕೃಷ್ಣಾ ನದಿ

7. ಆಶ್ರಯ ಯೋಜನೆ ಜಾರಿಗೆ ತಂದ ಉದ್ದೇಶ :
   A. ಉದ್ಯೋಗ ಒದಗಿಸಲು
   B. ವಸತಿ ಒದಗಿಸಲು
   C. ವ್ಯವಸಾಯ ಭೂಮಿಯನ್ನು ಒದಗಿಸಲು
   D. ಶಿಕ್ಷಣ ಒದಗಿಸಲು

8. ಗ್ರಾಹಕರ ರಕ್ಷಣಾ ಕಾಯ್ದೆ ಜಾರಿಗೆ ತಂದ ವರ್ಷ
   A. 1976
   B. 1986
   C. 1963
   D. 1960

**II. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಪ್ರತಿಯೊಂದಕ್ಕೂ ಉತ್ತರಿಸಿ. 8 x 1 = 8**

9. ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ತೆರೆದದ್ದು ಏಕೆ?

10. ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯಲಾಗಿದೆ?

11. ನಿರುದ್ಯೋಗ ಎಂದರೇನು?

12. ಹೆಣ್ಣು ಭ್ರೂಣ ಹತ್ಯೆ ಎಂದರೇನು?

13. ತೀರದುದ್ದಕ್ಕೂ ನಾವು ಏಕೆ ಮರಗಳನ್ನು ಬೆಳೆಸಬೇಕು?

14. ಭಾರತದಲ್ಲಿ ಅತ್ಯಂತ ಶೀತದಿಂದ ಕೂಡಿರುವ ತಿಂಗಳು ಯಾವುದು?

15. 15ನೇ ಮಾರ್ಚ್‌ನ್ನು ಗ್ರಾಹಕರ ದಿನವೆಂದು ನಾವು ಏಕೆ ಕರೆಯುತ್ತೇವೆ?

16. ರಾಷ್ಟ್ರೀಯ ಆದಾಯ ಎಂದರೇನು?

**III. ಈ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8 x 2 = 16**

17. ರಾಬರ್ಟ್ ಕ್ಲೈವ್ ಜಾರಿಗೆ ತಂದ ದ್ವಿಮುಖ ಸರ್ಕಾರವನ್ನು ವಿವರಿಸಿ.

18. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು ಯಾವುವು?

19. ಭಾರತ ಮತ್ತು ಪಾಕಿಸ್ಥಾನದ ನಡುವಿನ ಉದ್ವಿಗ್ನತೆಗೆ ಕಾರಣಗಳೇನು?

ಅಥವಾ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾನವ ಹಕ್ಕುಗಳ ನಿರ್ವಹಣೆಗೆ ನೀಡಿರುವ ನಿರ್ದೇಶನಗಳೇನು?

20. ನರ್ಮದ ಬಚಾವೋ ಆಂಧೋಲನದ ಬಗ್ಗೆ ಬರೆಯಿರಿ.

ಅಥವಾ

ಶ್ರಮ ವಿಭಜನೆಯಿಂದ ಆಗುವ ಅನುಕೂಲಗಳೇನು?

21. ಭಾರತ ವಾಯುಗುಣದ ಪ್ರಮುಖ ಋತುಗಳನ್ನು ತಿಳಿಸಿ.

22. ಇತ್ತೀಚೆಗೆ ಭಾರತದಲ್ಲಿ ಅರಣ್ಯ ಪ್ರಮಾಣ ಕಡಿಮೆಯಾಗಲು ಕಾರಣಗಳೇನು?

23. ಅನಾಭಿವೃದ್ಧಿಗೆ ಕಾರಣಗಳೇನು?

24. ಜಾನ್ ಎಫ್ ಕೆನಡಿ ನೀಡಿದ ಗ್ರಾಹಕ ಹಕ್ಕುಗಳು ಯಾವುವು?

**IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 3 ರಿಂದ 6 ವಾಕ್ಯಗಳಲ್ಲಿ ಉತ್ತರಿಸಿ. 9 x 3 = 27**

25. ಬ್ರಿಟೀಷ್ ಶಿಕ್ಷಣವು ಭಾರತದಲ್ಲಿ ಬೀರಿದ ಪರಿಣಾಮಗಳೇನು?

ಅಥವಾ

ಭಾರತ ಸ್ವಾತಂತ್ರ ಹೋರಾಟದಲ್ಲಿ ಕೊಡಗಿನ ಪುಟ್ಟ ಬಸಪ್ಪನ ಕೊಡುಗೆಗಳೇನು?

26. ಆರ್ಯ ಸಮಾಜದ ಉದ್ದೇಶಗಳೇನು?

27. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಅಂಶಗಳನ್ನು ವಿವರಿಸಿ.

28. ಭಾರತದಲ್ಲಿ ನಿರುದ್ಯೋಗವನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳಾವುವು?

29. ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡಿರುವ ಕ್ರಮಗಳನ್ನು ಪಟ್ಟಿಮಾಡಿ.

30. ಭಾರತದಲ್ಲಿ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

31. ಕೈಗಾರಿಕೆಗಳ ಕೇಂದ್ರೀಕರಣಕ್ಕೆ ಸಹಾಯಕವಾಗುವ ಅಂಶಗಳು ಯಾವುವು?

ಅಥವಾ

ಆವರ್ತಮಾರುತಗಳನ್ನು ಎದುರಿಸಲು ಕೈಗೊಳ್ಳಬಹುದಾದ ಕ್ರಮಗಳು ಯಾವುವು?

32. ಮಾನವ ಅಭಿವೃದ್ಧಿ ಸೂಚಕಗಳನ್ನು ವಿವರಿಸಿ.

ಅಥವಾ

ಗ್ರಾಮೀಣಾಭಿವೃದ್ಧಿಯ ಪ್ರಾಮುಖ್ಯತೆಯನ್ನು ವಿವರಿಸಿ.

33. ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳನ್ನು ತಿಳಿಸಿ.

ಅಥವಾ

ಬ್ಯಾಂಕುಗಳ ಗುಣಲಕ್ಷಣಗಳನ್ನು ತಿಳಿಸಿ.

**V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4 x 4 = 16**

34. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

35. ಭಾರತದ ಪ್ರಧಾನಮಂತ್ರಿಯಾಗಿ ಜವಹರ್‌ಲಾಲ್ ನೆಹರೂರವರ ಸಾಧನೆಗಳನ್ನು ವಿವರಿಸಿ.

ಅಥವಾ

ಅಸಹಕಾರ ಚಳುವಳಿಯ ಕಾಲದಲ್ಲಿ ಆದ ಪ್ರಮುಖ ಬೆಳವಣಿಗೆಗಳನ್ನು ವಿವರಿಸಿ.

36. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.

37. ಭಾರತದ ಭೂ ಬಳಕೆಯ ವಿಧಗಳನ್ನು ಪಟ್ಟಿಮಾಡಿ.

**VI. 38. ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ. 1 + 4 = 5**

A. ಗೋವಿಂದ ಪಂಥ್ ವಲ್ಲಭ ಸಾಗರ್

B. ಭಾರತದ ಚಹಾ ಬಂದರು

C. ಛತ್ರಪತಿ ಶಿವಾಜಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

D. ನೀಲಗಿರಿ

*ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38ರ ಬದಲಾಗಿ)*

ಹಿಮಾಲಯ ಪರ್ವತಗಳ ಪ್ರಾಮುಖ್ಯತೆಯನ್ನು ವಿವರಿಸಿ. **5**